

ದುಡ್ಡು ಉಪಯೋಗಿಸದೆ
ಬದುಕಲು ಸಾಧ್ಯ ಇಲ್ಲವೆ?
'ಇದೆ' ಎಂದು ಸಾಧಿಸಲು ಹೊರಟಿದ್ದಾನೆ
ಡೇನಿಯಲ್! ಕಳೆದ 9 ವರ್ಷಗಳಿಂದ
ಗುಹೆಯಲ್ಲೇ ವಾಸ ಮಾಡುತ್ತಿದ್ದಾನೆ;
ದುಡ್ಡನ್ನು ಮುಟ್ಟಿಯೇ ಇಲ್ಲ!

■ ಪಿ. ಶ್ರೀಧರ್ ನಾಯಕ್

# 'ದುಡ್ಡೇ ದೊಡ್ಡಪ್ಪ' ಅಲ್ಲ!

ಡೇನಿಯಲ್ ಸುಯೆಲೊ 9 ವರ್ಷಗಳಿಂದ ಗುಹಾವಾಸಿ. ಅವರಿಗೆ ಪ್ರೇಯಸಿ ಕೈಕೊಟ್ಟಿರಬೇಕು ಎಂದು ಭಾವಿಸಿದರೆ ಅದು ತಪ್ಪು. ಕಬ್ಬಿಣದ ಕೀಲು ಮುರಿಯಲು ಬಂದ ಸಾಲಿಗರು ಕಾರಣ ಇರಬೇಕು ಅಥವಾ ಅವರು ಕೆಲಸ ಮಾಡುತ್ತಿದ್ದ ಸಂಸ್ಥೆ 'ಪಿಂಕ್ ಸ್ಲಿಪ್' ಕೊಟ್ಟಿರಬೇಕು ಎಂದು ಅಂದುಕೊಂಡರೆ ಅದೂ ತಪ್ಪು. ಕಾಂಗ್ರೆಸ್ ಟಿಕೆಟು ಬಯಸಿ ಬಂದಾಗ ಕೊಡಲಿಲ್ಲ ಎಂದು ನವದೆಹಲಿಯಲ್ಲಿ ವೃದ್ಧ ಮಹಾಶಯ ಒಬ್ಬ ಮರವನ್ನೇ ಹತ್ತಿದ್ದ. ಇವರ ವಿಷಯದಲ್ಲಿ ಅದೂ ಕಾರಣವಲ್ಲ. ನಮ್ಮಲ್ಲಿ ಇತ್ತೀಚೆಗೆ ಒಳಗಿರುವ 'ಪರಮಾತ್ಮ'ನ ಕರೆಗೆ ಓಗೊಟ್ಟ ಮಹಾಶಯನೊಬ್ಬ ಲೈಟು ಕಂಬ ಏರಿದ್ದಂತೆ ಡೇನಿಯಲ್ ಸಾಹೇಬರು ಗುಹೆಗೆ ಪ್ರವೇಶ ಮಾಡಲಿಲ್ಲ.

ಅಮೆರಿಕದ ಯುಟಾ ಪ್ರಾಂತ್ಯದ ವಾಸಿ ಡೇನಿಯಲ್ 1987ರಲ್ಲಿ ಮಾನವಶಾಸ್ತ್ರದಲ್ಲಿ ಪದವಿ ಪಡೆದರು. ಅವರಿಗೆ ಉದ್ಯೋಗವೂ ಸಿಕ್ಕಿತು. ಕೈತುಂಬ ಹಣವೂ ಓಡಾಡತೊಡಗಿತು. ಹಣವೊಂದು ಇದ್ದರೆ ಸಾಕು ಎಲ್ಲವೂ ಇದ್ದಂತೆ ಎಂದು ಭಾವಿಸಿದ ಜನರು ನಮ್ಮಲ್ಲಿದ್ದಾರೆ.

ಆದರೆ ಡೇನಿಯಲ್ ಹಾಗಲ್ಲ. ಕೊಲರಾಡೋದಲ್ಲಿ ಉದ್ಯೋಗದಲ್ಲಿ ಇದ್ದಾಗ ಅಲ್ಲಿನ ಸ್ಪರ್ಧಾತ್ಮಕ ವಾತಾವರಣ ಅವರ ಉಸಿರು ಕಟ್ಟಿಸುವಂತಿತ್ತು. ಕೆಲಸಕ್ಕೆ ರಾಜೀನಾಮೆ ನೀಡಿ ಯುಟಾದ ಮೊಹಬಕ್ಕೆ ತೆರಳಿದರು. ಮಾನಸಿಕ ಒತ್ತಡದಿಂದ ಪಾರಾಗಬೇಕಾದರೆ ನಮ್ಮ ಯೋಚನೆಗಳನ್ನು ಸರಳಗೊಳಿಸಬೇಕು ಎಂದು ಅನಿಸಿತು. 'ನನ್ನ ನಿರುಪಯೋಗಿ ಯೋಚನೆಗಳನ್ನು ಮನಸ್ಸಿನಿಂದ ಹೊರಹಾಕಿದೆ. ಅನಗತ್ಯವಾದುದನ್ನು ನನ್ನಿಂದ ದೂರವಾಗುವಂತೆ ಮಾಡಿದೆ. ನನಗೆ ಅತ್ಯಂತ ಕಡಿಮೆ ಸಾಕು ಎನ್ನುವುದು ಹೆಚ್ಚು ಹೆಚ್ಚು ಅರಿವಾಗತೊಡಗಿತು. ಇದು ಪ್ರಯತ್ನ ಪೂರ್ವಕವಾಗಿ ಅಲ್ಲ. ಮರಗಳು ಎಲೆಗಳನ್ನು ಉದುರಿಸಿದಂತೆ. ಇದರಿಂದ ನನ್ನ ಮಾನಸಿಕ ಒತ್ತಡ ಕಡಿಮೆಯಾಯಿತು' ಎಂದು ವಿವರಿಸುತ್ತಾರೆ ಅವರು.

ಎಲ್ಲವೂ ಇದ್ದಾಗಲೂ ಕೊರತೆ ಕಾಡುತ್ತದೆ. ಇನ್ನಷ್ಟು ಬೇಕೆನಿಸುತ್ತದೆ. ಇನ್ನಷ್ಟು ಬೇಕಿದ್ದರೆ ಮತ್ತಷ್ಟು ದುಡ್ಡು ಬೇಕು. ಈ ದುಡ್ಡಿಗೇ ತಿಲತರ್ಪಣ ನೀಡಿದರೆ ಹೇಗೆ? ಹಣವಿಲ್ಲದೆ ಬದುಕಲು ಸಾಧ್ಯ ಎಂಬ ತೀರ್ಮಾನಕ್ಕೆ ಅವರು ಬಂದರು. ಅದು 2000ನೆ ಇಸವಿ. 'ಉಚಿತವಾಗಿ ಪಡೆಯಿರಿ, ಉಚಿತವಾಗಿ ಕೊಡಿ' ಎಂದು ಸಾರುತ್ತಲೇ ಗುಹೆಯ ವಾಸಿಯಾದರು.

ಕಳೆದ 9 ವರ್ಷಗಳಿಂದ 5/15 ಅಡಿ ವಿಸ್ತೀರ್ಣದ ಗುಹೆಯಲ್ಲೇ ಅವರ ವಾಸ.

ಅವರ ಬದುಕಿನಲ್ಲಿ ಈ ಮಹತ್ವದ ತಿರುವು ದೊರೆತಿದ್ದು ಅಲಸ್ಕಾ ಭೇಟಿಯ ಸಂದರ್ಭದಲ್ಲಿ. ತಮ್ಮ ಇಬ್ಬರು ಮಿತ್ರರ ಜತೆ ಅಲ್ಲಿಗೆ ತೆರಳಿದ್ದರು. ಅಲ್ಲಿ ಚಿಂತನೆಯ ದಿಕ್ಕು ಬದಲಾಯಿತು. ಹಣವೇ ಎಲ್ಲ ರೋಗರುಜಿನಗಳಿಗೆ ಮೂಲ, ಎಲ್ಲ ಸಮಸ್ಯೆಗಳಿಗೆ ಮೂಲ ಎಂದು ಅನಿಸಿತು. ಅಲ್ಲಿಂದ ಮರಳಲು ನಿರ್ಧರಿಸಿದಾಗ ಅವರ ಬಳಿ ಇದ್ದುದು ಕೇವಲ 50 ಡಾಲರ್. ಅವರಿವರ ವಾಹನದಲ್ಲಿ ಲಿಫ್ಟ್ ಕೇಳಿ ಯುಟಾಕ್ಕೆ ಬಂದಿಳಿದಾಗ ಉಳಿದದ್ದು 25 ಡಾಲರ್ ಮಾತ್ರ. ಅಂದೇ ನಿರ್ಧರಿಸಿದರು, ಹಣ ಇಲ್ಲದೆ ಬದುಕಬಹುದು ಎಂದು.

ಹಣವಿಲ್ಲದೆ ಭಾರತದಲ್ಲಿ ಸಾಧುಗಳು ಬದುಕುತ್ತಾರೆ ಎಂದು ಕೇಳಿ ಗೊತ್ತಿದ್ದ ಡೇನಿಯಲ್‌ಗೆ ಅವರನ್ನು ಭೇಟಿಯಾಗಿ ಅವರ ಜೀವನ ವಿಧಾನ ಅರಿಯಬೇಕೆನಿಸಿತು. ಬೌದ್ಧ ಸನ್ಯಾಸಿಗಳೂ ಅವರಂತೆ ಹಣಕಾಸಿಲ್ಲದೆ ಒಂದು ಊರಿನಿಂದ ಇನ್ನೊಂದು ಊರಿಗೆ ತೆರಳುತ್ತಾರೆ ಎನ್ನುವುದನ್ನು ಕೇಳಿದ್ದರು. ಮಹಾತ್ಮ ಗಾಂಧೀಜಿಯವರ ಸರಳ ಜೀವನದ ಬಗ್ಗೆ ಕೇಳಿ ಗೊತ್ತಿತ್ತು. ಥಾಯ್ಲೆಂಡ್‌ಗೆ ಭೇಟಿ ನೀಡಿ ಬೌದ್ಧ ಸನ್ಯಾಸಿಗಳ ಜೀವನ ವಿಧಾನ ಅಧ್ಯಯನ ಮಾಡಿದರು. ಅಲ್ಲಿಂದ ಭಾರತಕ್ಕೆ ಬಂದು ಧರ್ಮಶಾಲದಲ್ಲಿ ದಲಾಯಿ ಲಾಮಾ ಅವರನ್ನು ಭೇಟಿಯಾದರು.

'ಸತ್ಯ ಎನ್ನುವುದು ಪ್ರತಿಯೊಂದು ಧರ್ಮದಲ್ಲಿದೆ. ಕೆಲವರು ಬೇರೆ ಧರ್ಮದಲ್ಲಿ ಸಾಫಲ್ಯವನ್ನು ಕಾಣುತ್ತಾರೆ' ಎಂದು ದಲಾಯಿ ಲಾಮ ಹೇಳಿದ್ದು ಸತ್ಯ ಎಂದೆನಿಸಿತು. ಅಲ್ಲಿಂದ ಮರಳಿದ ಬಳಿಕ ಅಮೆರಿಕದಲ್ಲಿ ಸಾಧು ಆಗಿ ಬದುಕಲು ಸಾಧ್ಯ ಎಂದೆನಿಸಿತು.

'ಹಣವಿಲ್ಲದೆ ಇರುವೆ, ಜಿಂಕೆ, ಗುಬ್ಬಚ್ಚಿಗಳು, ಬ್ಯಾಕ್ಟೀರಿಯಾಗಳು ಬದುಕಲು ಸಾಧ್ಯ. ಗೆಲಾಕ್ಸಿಗಳೂ ಇವೆ' ಎಂದು ಹೇಳುವ ಡೇನಿಯಲ್, ನಮ್ಮ ಚಿಂತನೆಯ ದಿಕ್ಕನ್ನೇ ಬದಲಾಯಿಸುತ್ತಾರೆ. 'ನನ್ನಿಂದಲೂ ಸಾಧ್ಯ?' ಎಂದು ಹೇಳಿ ತಮ್ಮ ಬದುಕಿನ ಉದಾಹರಣೆ ನೀಡುತ್ತಾರೆ. 'ಪ್ರತಿಯೊಬ್ಬರೂ ನನ್ನಂತೆ ತಮ್ಮಲ್ಲಿ ಹೆಚ್ಚುವರಿಯಾಗಿ ಇದ್ದುದ್ದನ್ನು ಇಲ್ಲದವರಿಗೆ ಹಂಚುತ್ತಾ ಹೋದರೆ ಪ್ರತಿಯೊಬ್ಬರಿಗೆ ಮನೆ, ಅರಿವೆ, ಆಹಾರ ದೊರೆಯುತ್ತದೆ' ಎಂದು ಅಪ್ಪಟ ಸಮಾಜವಾದಿಯಾಗಿ ಹೇಳುತ್ತಾರೆ.

ಡೇನಿಯಲ್‌ಗೆ ಈಗ 48 ವರ್ಷ ವಯಸ್ಸು. ಅವರ ಬ್ಲಾಗ್‌ಗಾಗಿ ಗುಹೆಯ ಸಮೀಪವೇ ಇರುವ ವಾಚನಾಲಯದ ಕಂಪ್ಯೂಟರ್ ಅನ್ನು ಉಚಿತವಾಗಿ ಬಳಸುತ್ತಾರೆ. ಜನರು ಕೊಟ್ಟದ್ದನ್ನೆಲ್ಲ ಸ್ವೀಕರಿಸುತ್ತಾರೆ. ಜನರ ಬಳಿ, ಸಂಸ್ಥೆಗಳ ಬಳಿ ಕೇಳಿ ಪಡೆದುಕೊಳ್ಳುತ್ತಾರೆ. ಅವರ ಸ್ನೇಹಿತರು ಊಟ, ಉಪಹಾರ ಕೊಡುವುದೂ ಇದೆ.

'ನಾನು ಈವರೆಗೆ ಓತಿ, ಅಳಿಲು, ಮೊಲ, ರಾಕೂನ್, ಹಾವು, ಗೆದ್ದಲು, ಇರುವೆ, ಮರಿಹುಳ, ಸಣ್ಣಪುಟ್ಟ ಕೀಟಗಳನ್ನು ತಿಂದಿದ್ದೇನೆ' ಎಂದು ಡೇನಿಯಲ್ ಸತ್ಯ ಒಪ್ಪಿಕೊಳ್ಳುತ್ತಾರೆ. (ಅದೃಷ್ಟವಶಾತ್ ಅವರಿಗೆ ಕನ್ನಡ ಗೊತ್ತಿಲ್ಲ. ಆದುದರಿಂದ ನಮ್ಮ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಟ್ಯೂಬ್‌ಲೈಟ್, ಗಾಜಿನ ಚೂರು ನುಂಗುವ ನುಂಗಣ್ಣನವರ ಸುದ್ದಿಗಳನ್ನು ಅವರು ಓದಿಲ್ಲ. ಓದಿದ್ದರೆ ಅದನ್ನೂ ತಿನ್ನುತ್ತಿದ್ದರೇನೋ!)

'ಹಣ ಇದ್ದಾಗ ಅದರ ಕೊರತೆ ನನ್ನಲ್ಲಿ ಇದೆ ಎಂದು ಅನಿಸುತಿತ್ತು. ಈಗ ಆ ಸಮಸ್ಯೆಯೇ ಇಲ್ಲ' ಎನ್ನುವುದು ಡೇನಿಯಲ್ ಸ್ಪಷ್ಟನುಡಿ. ಅಮೆರಿಕದ ಕೊಳ್ಳುಬಾಕ ಸಂಸ್ಕೃತಿಯವರ ಮಹತ್ವದ ಸಾಧನಗಳಾದ ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಇಲ್ಲದೆ ಬದುಕಲು ಸಾಧ್ಯ ಎಂದು ಅವರು ತೋರಿಸಿಕೊಟ್ಟಿದ್ದಾರೆ.

ಅಂದ ಹಾಗೆ, ಡೇನಿಯಲ್ ಅವಿವಾಹಿತ.